ತಮ್ಮಣ್ಣ ಬೀಗಾರ

ಮಕ್ಕಳ ಮನೋಲೋಕ ಬೆಳಗುವ ಪುಸ್ತಕ

ಮಕ್ಕಳ ಲೋಕವೆಂದರೆ ಅದು ಸಂತಸದ ಲೋಕ. ಅಲ್ಲಿ ಯಾವಾಗಲೂ ಪ್ರೀತಿಯೇ ಗೆಲ್ಲುವುದು. ಇಂತಹ ಗೆಲುವು ಸದಾ ಅವರಲ್ಲಿ ತುಂಬಿಕೊಂಡು ಇರಬೇಕೆಂಬುದು ಎಲ್ಲರ ಹಂಬಲ. 'ಟಿಫಿನ್ ಬಾಕ್ಸ್' ಕೂಡ ಅಂತಹುದೇ ಪ್ರೀತಿಯನ್ನು ವಿಸ್ತರಿಸುವಂತೆ ರೂಪುಗೊಂಡಿದೆ. ಇದು ಮಕ್ಕಳ ಲೋಕದ ಸಹಜತೆ ಕೂಡ.

ಮಕ್ಕಳ ಟಿಫಿನ್ ಬಾಕ್ಸ್ ಸುತ್ತ ಹರಡಿಕೊಂಡಿರುವ ಕಥೆ ಊಟ- ಆಟದ ಜೊತೆಯಲ್ಲಿ ಒಂದಾಗಿ ಸಾಗುವಾಗ ಮಕ್ಕಳಲ್ಲಿ ಬರುವ ಸಂಶಯ, ಅಪನಂಬಿಕೆಗಳೆಲ್ಲ ಸ್ನೇಹದಲ್ಲಿ ಕಳೆದು ಹೋಗಿ ಹೇಗೆ ಸಂತಸ ಹರಡುತ್ತದೆ ಎನ್ನುವುದನ್ನು ಬಹಳ ಸಹಜವಾಗಿ ಹೇಳಿದೆ. ಇದು ಮಕ್ಕಳ ಮೂಲಕ ಹಿರಿಯರು ತಿಳಿಯಬೇಕಾದ ಪಾಠದಂತಿದೆ. ಆನಂದ ಪಾಟೀಲರ ಸುಂದರ ರೇಖಾಚಿತ್ರ ಪುಸ್ತಕಕ್ಕೆ ಮೆರಗು ನೀಡಿದೆ. ಎಲ್ಲರೂ ಓದಬೇಕಾದ ಪುಸ್ತಕ.

ಅಜ್ಜಿ ಅಂದ್ರ ಹೆಂಗಿರ್ತಾಳ?

ಏಕತಾನತೆಯ ಲಯ ಹಾಗೂ ಪ್ರಾಸದ ಹಂಗನ್ನು ತೊರೆದು, ಪ್ರಾದೇಶಿಕ ಭಾಷೆಯ ಸೊಗಡನ್ನು ಬಳಸಿಕೊಂಡು ಬರೆದ ಮಕ್ಕಳ ಪದ್ಯಗಳ ಸಂಕಲನ

ಲೇ: ಕೆ. ಶಿವಲಿಂಗಪ್ಪ ಹಂದಿಹಾಳು
ಬೆಲೆ: ರೂ. 40
ಪ್ರ: ಅಭಿನವ, ಬೆಂಗಳೂರು
ಮೊ: 9448804905

ಇದಾಗಿದೆ. ಮಕ್ಕಳಾಟ, ಬಾಲ್ಯದ ಮೋಜು, ತುಂಟತನ, ರಮ್ಯ ಭಾವಕೋಶವನ್ನು ಲೇಖಕರು ಕವಿತೆಗಳಲ್ಲಿ ತೆರೆದಿಟ್ಟಿದ್ದಾರೆ. ಚಂದ್ರ ಮತ್ತು ಮಳೆಯೊಂದಿಗಿನ ಅಪ್ಪತೆ ಆಕರ್ಷಕವಾಗಿ ಮೂಡಿ ಬಂದಿವೆ. ಸಣ್ಣ ಕೀಟದಂತಹ ಮಕ್ಕಳಾಟದ